ಸ್ವಲ್ಪ ಸಮಯದ ನಂತರ ಎರಡು ಸ್ಕೂಲ್ ಬ್ಯಾಗಗಳನ್ನು ತನ್ನ ಬೆನ್ನಿಗೆ ತಗುಲಿಸಿಕೊಂಡು ಯುನಿಫಾರ್ಮ್ ಬಟ್ಟೆ ತೊಟ್ಟ ನಾಲ್ಕು ವರುಷದ ಹುಡುಗನೊಬ್ಬನನ್ನು ಹೆಗಲ ಮೇಲೆ ಕೂಡಿಸಿಕೊಂಡು ಮತ್ತು ಎಂಟು ವರುಷದ ಹುಡುಗಿಯ ಕೈಯನ್ನು ಹಿಡಿದುಕೊಂಡು ಸಾಥಿಯಾ ಅವಸರದಿಂದ ಓಡುತ್ತಿರುವುದನ್ನು ನಾನು ನೋಡಿದೆ.

ಕೆಲ ಸಮಯದ ನಂತರ ವಸಂತ ಲೋಣಕರ ಬಂದು ಬಹಳ ಹೊತ್ತು ಮಾತನಾಡುತ್ತ ಕುಳಿತ. ನಾವು ಕಲ್ಯಾಣದಿಂದ ಬಾಂದ್ರಾಕ್ಕೆ ಸ್ಥಳಾಂತರಗೊಂಡದ್ದು ಯಾಕೆ ಎಂಬುದನ್ನು ಆತ ತಿಳಿಯಬಯಸಿದ್ದ. ನನ್ನ ತಂದೆಯವರ ಎರಡೂ ಕಿಡ್ನಿಗಳು ವಿಫಲವಾದುದನ್ನು ಹೇಳಿ ಅವರಿಗೆ ಡಯಾಲಿಸಿಸ್ ಅವಶ್ಯಕತೆ ಇರುವುದನ್ನು ನಾನು ವಿವರಿಸಿದೆ. ಕಲ್ಯಾಣದಲ್ಲಿ ಇದರ ಸೂಕ್ತ ಅನುಕೂಲತೆಗಳಿಲ್ಲ. ಬಾಂದ್ರಾದಲ್ಲಿ ದೊಡ್ಡ ಆಸ್ಪತ್ರೆಯಿದೆ. ಎಲ್ಲ ರೀತಿಯ ವ್ಯವಸ್ಥೆ ಮಾಡಲು ಇಲ್ಲಿ ಸಾಧ್ಯವಿದೆ ಎಂದು ತಿಳಿಸಿದೆ.

ಅವನು ಹೊರಟು ಹೋದ ಮೇಲೆ ಸುಷ್ಮಾ ಬಹಳ ಖುಷಿಯಿಂದ ಇರುವುದನ್ನು ನಾನು ನೋಡಿದೆ. ಮನೆಗೆ ಬಂದ ಅತಿಥಿಗಳಿಗೆ ಪೋಹೆ, ಚಹಾ ಕೊಟ್ಟು ಕಳುಹಿಸಿದ ಗೃಹಿಣಿಯ ಮನದ ಸಂತೃಪ್ತಿ ಅವಳ ಮೊಗದಲ್ಲಿ ರಾರಾಜಿಸುತ್ತಿತ್ತು.

ಕೆಲ ದಿವಸಗಳಾದ ಮೇಲೆ ಕಾಶೀರಾಮ ಕುಲಕರ್ಣಿಯವರ ಮಗ ಮನೆಗೆ ಬಂದ. “ಅಂಕಲ್, ನಿಮ್ಮನ್ನು ನಮ್ಮ ಡ್ಯಾಡಿ ಮೇಲೆ ಬರುವಂತೆ ತಿಳಿಸಿದ್ದಾರೆ” ಎಂದ.

ಕಾಶೀರಾಮ ಕುಲಕರ್ಣಿಯವರು ಸೊಸೈಟಿಯ ಸೆಕ್ರೇಟರಿಯಾಗಿದ್ದರು. ಮೊದಲನೆಯ ಅಂತಸ್ತಿನಲ್ಲಿ ಅವರು ಇರುತ್ತಿದ್ದರು. ನಾನು ಮೇಲೆ ಹೋಗಿ ಅವರ ಫ್ಲ್ಯಾಟಿನ ಬೆಲ್ ಬಾರಿಸಿದೆ.

ಕಾಶೀರಾಮ ಕುಲಕರ್ಣಿಯವರೇ ಬಾಗಿಲು ತೆರೆದರು. ಬಹುಶಃ ಅವರು ಜೀವನದಲ್ಲಿ ಎಂದೂ ನಕ್ಕಿರಲಿಕ್ಕಿಲ್ಲವೆಂಬ ಸಂದೇಹ ಅವರನ್ನು ಕಂಡ ಕೂಡಲೇ ನನಗೆ ಬಂದಿತು.

ನನಗೆ ಸನ್ನೆ ಮಾಡಿ ಒಳಗೆ ಬಂದು ಕುಳಿತುಕೊಳ್ಳಲು ತಿಳಿಸಿದರು. ಬಾಯೊಳಗಿನ ಬ್ರಶ್ ಅನ್ನು ಹೊರದೆಗೆದು ಸಿಂಕಿನಲ್ಲಿ ಬುರುಗನ್ನು ಉಗುಳಿ, ಬಾಯಿ ತೊಳೆದುಕೊಂಡು ಹೊರಗೆ ಬಂದರು. ಕಟ್ಟಿಗೆ ಕಪಾಟಿನೊಳಗಿನಿಂದ ಫೈಲೊಂದನ್ನು ಹೊರತೆಗೆದು ಅದರೊಳಗಿನಿಂದ ಎರಡು ಫಾರ್ಮುಗಳನ್ನು ತೆಗೆದು ನನ್ನ ಕೈಯಲ್ಲಿಡುತ್ತ, “ಇವುಗಳನ್ನು ತುಂಬಿ ಕೊಡಿರಿ. ಸೊಸೈಟಿಯ ಇಪ್ಪತ್ತು ಸಾವಿರ ರೂಪಾಯಿಗಳನ್ನು ನೀವು ತುಂಬಬೇಕಾಗುತ್ತದೆ. ಆದಷ್ಟು ಬೇಗ ತುಂಬಿ ಬಿಡಿರಿ” ಎಂದು ಹೇಳಿದರು.

ಆ ಮನುಷ್ಯನೊಂದಿಗೆ ಹೆಚ್ಚಿಗೆ ಮಾತಾಡುವುದು ತರವಲ್ಲವೆಂದು ನನಗನ್ನಿಸಿತು. ಫಾರ್ಮುಗಳನ್ನು ತೆಗದುಕೊಂಡು ನಾನು ಹೊರಟಿದ್ದೆ. ಅಷ್ಟರಲ್ಲಿ ಅವರು, “ಸ್ವಲ್ಪ ತಾಳಿ, ನಿಮ್ಮಲ್ಲಿ ಸಾಥಿಯಾನ ಜೊತೆಗೆ ಸಲುಗೆ ಹೆಚ್ಚಾಗುತ್ತಿದೆಯೆಂದು ತಿಳಿದು ಬಂದಿದೆ. ಆತನೊಬ್ಬ ನಂಬಿಗಸ್ಥ ಮನುಷ್ಯನಲ್ಲವೆಂದು ನಿಮ್ಮನ್ನು ನಾನು ಮೊದಲೇ ಎಚ್ಚರಿಸಬಯಸುತ್ತೇನೆ. ಅವನು ಕೊಳೆಗೇರಿಯಲ್ಲಿ ದಾರು ಅಂಗಡಿಯಲ್ಲಿ ದಾರು ಮಾರುತ್ತಾನೆ ಮತ್ತು ಮಟಕಾ ಬುಕ್ಕಿಂಗ್ ಕೂಡಾ ಮಾಡುತ್ತಾನೆ. ಪೊಲೀಸರು ಯಾವಾಗ ಬೇಕಾದಾಗ ಅವನನ್ನು ಜೇಲಿಗೆ ಅಟ್ಟಬಹುದು. ಜಾಗರೂಕರಾಗಿರಿ” ಎಂದರು.

“ಥ್ಯಾಂಕ್ಯೂ ನಾವು ನಿಮ್ಮ ಮಾತುಗಳನ್ನು ಗಮನದಲ್ಲಿಟ್ಟುಕೊಳ್ಳುತ್ತೇವೆ” ಎಂದು ಹೇಳುತ್ತ ಮೆಟ್ಟಿಲುಗಳನ್ನಿಳಿದು ಬಂದೆ.

★★★